# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **(430)355** |
| ಸದಸ್ಯರ ಹೆಸರು | : | ಶ್ರೀ ಪಿ.ಆರ್ ರಮೇಶ್<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 23-09-2020 |
| ಉತ್ತರಿಸುವ ಸಚಿವರು | : | ಮಾನ್ಯ ಕಂದಾಯ ಸಚಿವರು |

| ಪ್ರಶ್ನೆ | ಉತ್ತರ |
|---|---|
| (ಅ) ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಅತಿವೃಷ್ಟಿಯಿಂದ ಆದ ನಷ್ಟದ ಮೊತ್ತ ಎಷ್ಟು; (ಜಿಲ್ಲಾವಾರು, ತಾಲೂಕುವಾರು, ಗ್ರಾಮವಾರು ಮಾಹಿತಿ ನೀಡುವುದು) | ಪ್ರಕೃತಿ ವಿಕೋಪದಿಂದ ಕಳೆದ ಮೂರು ವರ್ಷದಲ್ಲಿ ಕೆಳಕಂಡಂತೆ ಹಾನಿಯಾಗಿದೆ:<br><br>2020 ಪ್ರವಾಹ – ರೂ.9440.85 ಕೋಟಿ<br>2019 ಪ್ರವಾಹ – ರೂ.35,160.81 ಕೋಟಿ<br>2018 ಪ್ರವಾಹ – ರೂ.4262.09ಕೋಟಿ |
| (ಆ) ನಷ್ಟದ ಮಾಹಿತಿಯನ್ನು ಪರಿಹಾರಕ್ಕಾಗಿ ಕೇಂದ್ರ ಸರ್ಕಾರದ ಜೊತೆಗೆ ಹಂಚಿಕೊಳ್ಳಲಾಗಿದೆಯೇ; ಈ ಮೂರು ವರ್ಷಗಳಲ್ಲಿ ಕೇಂದ್ರ ಸರ್ಕಾರದ ವತಿಯಿಂದ ನಷ್ಟ ಪರಿಹಾರವಾಗಿ ಎಷ್ಟು ಮೊತ್ತವನ್ನು ಬಿಡುಗಡೆಗೊಳಿಸಲಾಗಿದೆ; ಮತ್ತು ಎಷ್ಟು ಮೊತ್ತವನ್ನು ವಿತರಿಸಲಾಗಿದೆ ಅಥವಾ ವಿನಿಯೋಗಿಸಲಾಗಿದೆ ; (ಜಿಲ್ಲಾವಾರು, ತಾಲೂಕುವಾರು, ಗ್ರಾಮವಾರು ಮಾಹಿತಿ ನೀಡುವುದು; | ಪ್ರವಾಹ ಪರಿಹಾರಕ್ಕಾಗಿ ಕೇಂದ್ರ ಸರ್ಕಾರದಿಂದ ಆರ್ಥಿಕ ನೆರವನ್ನು ಕೋರಲಾಗಿದ್ದು, NDRF ಅಡಿ ಕೆಳಕಂಡಂತೆ ರಾಜ್ಯಕ್ಕೆ ಅನುದಾನ ಬಿಡುಗಡೆ ಮಾಡಲಾಗಿದೆ.<br>2020 ಪ್ರವಾಹ – ಅನುದಾನ ನಿರೀಕ್ಷಿಸಿದೆ<br>2019 ಪ್ರವಾಹ – ರೂ.1652.85 ಕೋಟಿ<br>2018 ಪ್ರವಾಹ – ರೂ.525.22 ಕೋಟಿ<br>ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಿದ ಅನುದಾನವನ್ನು ಸಂಪೂರ್ಣ ವಿತರಿಸಲಾಗಿದೆ ಮತ್ತು ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ವೆಚ್ಚ ಭರಿಸಲಾಗಿದೆ. |
| (ಇ) ಕೇಂದ್ರ ಸರ್ಕಾರದ ವತಿಯಿಂದ ಪರಿಹಾರ ಧನವಾಗಿ ಎಷ್ಟು ಮೊತ್ತ ಬಾಕಿ ಬರಬೇಕಿದೆ; ಮತ್ತು ಸರ್ಕಾರದ ಕ್ರಮವೇನು; (ಮಾಹಿತಿ ನೀಡುವುದು) | 2020 ಪ್ರವಾಹ ಪರಿಹಾರ ಹೊರತುಪಡಿಸಿ ಕೇಂದ್ರದಿಂದ ಯಾವುದೇ ಅನುದಾನ ಬಿಡುಗಡೆ ಬಾಕಿ ಇರುವುದಿಲ್ಲ. |
| (ಈ) ಎಷ್ಟು ಜನರಿಗೆ ನಷ್ಟ ಪರಿಹಾರವನ್ನು ವಿತರಿಸಲಾಗಿದೆ; ವಿತರಿಸಲು ಎಷ್ಟು ಬಾಕಿ ಇದೆ? (ಜಿಲ್ಲಾವಾರು, ತಾಲೂಕುವಾರು ಗ್ರಾಮವಾರು ಮಾಹಿತಿ ನೀಡುವುದು) | 2019 ಪ್ರವಾಹದಿಂದ ಬೆಳೆ ಹಾನಿಯಾದ 6,52,947 ರೈತರ ಬ್ಯಾಂಕ್ ಖಾತೆಗೆ ರೂ.1202.04 ಕೋಟಿಗಳನ್ನು ಜಮೆ ಮಾಡಲಾಗಿದೆ. 1,25,921 ಮನೆ ಹಾನಿಯಾದ ಪ್ರಕರಣಗಳಿಗೆ ಮಾರ್ಗಸೂಚಿಯಂತೆ ರೂ.387.26 ಕೋಟಿಗಳನ್ನು ಪಾವತಿಸಲಾಗಿದೆ.<br>2018 ಪ್ರವಾಹದಿಂದ ಬೆಳೆ ಹಾನಿಯಾದ 1,66,735 ರೈತರ ಬ್ಯಾಂಕ್ ಖಾತೆಗೆ ರೂ.164.58 ಕೋಟಿಗಳನ್ನು ಜಮೆ ಮಾಡಲಾಗಿದೆ.<br><br>7865 ಮನೆ ಹಾನಿಯಾದ ಪ್ರಕರಣಗಳಿಗೆ ಮಾರ್ಗಸೂಚಿಯಂತೆ ರೂ.74.65 ಕೋಟಿಗಳನ್ನು ಪಾವತಿಸಲಾಗಿದೆ.<br>ಉಳಿದ ಮೊತ್ತವನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಮೂಲಭೂತ ಸೌಕರ್ಯಗಳ ತುರ್ತು ದುರಸ್ತಿಗಾಗಿ ವೆಚ್ಚ ಮಾಡಲಾಗಿದೆ. |

*ಕಂಇ 430 ಟಿಎನ್ಆರ್ 2020*

**(ಆರ್. ಅಶೋಕ)**
ಕಂದಾಯ ಸಚಿವರು